

# ಎಲ್ಲ ಮಹಿಳೆಯರಿಗೂ ಪ್ರಿಯ ಮಟ್ಕಾ ಸಿಲ್ಕ್ ಸೀರೆ!

ರೇಷ್ಮೆ ಸೀರೆಗಳಲ್ಲಿ ನೂರೆಂಟು ವೈವಿಧ್ಯ. ಇದೀಗ ಈ ಸಾಲಿಗೆ ಹೊಸ ಸೇರ್ಪಡೆ ಮಟ್ಕಾ ಸಿಲ್ಕ್ ಸೀರೆ..!

■ ಆಶಾ ಎಸ್. ಕುಲಕರ್ಣಿ

ನಿತ್ಯ ನೂತನವಾಗಿ ಕಂಗೊಳಿಸುವ ಸೀರೆಗಳಲ್ಲಿ ಫ್ಯಾಷನ್‌ಗೆ ತಕ್ಕಂತೆ ಕೆಲವೊಂದು ವಿನ್ಯಾಸಗಳಲ್ಲಿ ಮತ್ತು ಬಣ್ಣಗಳಲ್ಲಿ ಬದಲಾವಣೆಯನ್ನು ನಾವು ಕಾಣಬಹುದು. ಸೀರೆಗಳ ಒಂದು ವಿಶೇಷ ಎಂದರೆ ಇದನ್ನು ಸಂಪ್ರದಾಯದ ಪ್ರಕಾರ ಉಡಲೂ ಬಹುದು ಅಥವಾ ಫ್ಯಾಷನೆಬಲ್ಲಾಗಿ ಕೂಡ ಉಡಬಹುದು. ಭಾರತದ ಅನೇಕ ಪ್ರಾಂತಗಳಲ್ಲಿ ಸೀರೆ ತನ್ನದೇ ಆದ ಛಾಪು ಮೂಡಿಸಿದೆ. ನಾನಾ ಪ್ರಾಂತಗಳಲ್ಲಿ ಮಹಿಳೆಯರು ಸೀರೆಯನ್ನು ಅನೇಕ ರೀತಿಯಲ್ಲಿ ಉಡುವುದನ್ನು ನಾವು ಕಾಣುತ್ತೇವೆ. ಅವರು ಉಟ್ಟ ಸೀರೆಯ ರೀತಿಯಿಂದ ಅವರು ಯಾವ ಪ್ರಾಂತಕ್ಕೆ ಸೇರಿದವರು ಎಂದು ತಿಳಿದುಕೊಳ್ಳಬಹುದು.

ರೇಷ್ಮೆಯ ತವರೂರಾದ ಭಾರತದಲ್ಲಿ ಜರಿ ಸೀರೆಗಳ ವಿಭಿನ್ನತೆ ವೈವಿಧ್ಯತೆಗಳಿಗೆ ಕೊರತೆಯೇನಿಲ್ಲ. ದಕ್ಷಿಣ ಭಾರತದಲ್ಲಿ ಮೈಸೂರು ಸಿಲ್ಕ್ ಸೀರೆ, ಧರ್ಮಾವರಂ, ಕಾಂಜೀವರಂ, ಇಳಕಲ್ ಸೀರೆಗಳು.. ಹೀಗೆ ಸಾಕಷ್ಟು ವಿಶ್ವಮಟ್ಟದಲ್ಲಿ ಪ್ರಸಿದ್ಧಿ ಪಡೆದ ಸೀರೆಗಳು ದೊರೆಯುತ್ತವೆ. ಅದರಂತೆ ಉತ್ತರ ಭಾರತದಲ್ಲಿ ಗುಜರಾತ್‌ನ ರೇಷ್ಮೆ ಸೀರೆಗಳು, ಮಧ್ಯಪ್ರದೇಶದ ಚಂದೇರಿ, ಪಶ್ಚಿಮ ಬಂಗಾಳದ ತಾಂತ್, ಟಸ್ಸಾರ್, ಮೂಗಾ, ಕಾಂತಾ, ಬನಾರಸ್ ಹೀಗೆ ಸಾಕಷ್ಟು ಸೀರೆಗಳು ಪ್ರಸಿದ್ಧಿ ಪಡೆದುಕೊಂಡಿವೆ. ಇದೀಗ ಪಶ್ಚಿಮ ಬಂಗಾಳದ ಸೀರೆಗಳಿಗೆ ಒಂದು ಹೊಸ ಸೀರೆ ಸೇರ್ಪಡೆಯಾಗಿದೆ. ಮಾಲ್ದಾ ಮತ್ತು ಮುರ್ಶಿದಾಬಾದ್ ಜಿಲ್ಲೆಯ ಕಚ್ಚಾ ರೇಷ್ಮೆಯನ್ನು ಸಂಸ್ಕರಿಸಿ ಸಿದ್ಧಪಡಿಸಲಾಗುವ ಮಟ್ಕಾ ಸಿಲ್ಕ್ ಸೀರೆಗಳು ಲೇಟೆಸ್ಟ್ ಟ್ರೆಂಡ್ ಎಂತಲೇ ಹೇಳಬಹುದು. ಇವು ಭಾರತದಲ್ಲಿ ಮಾತ್ರವಲ್ಲ ವಿದೇಶದಲ್ಲಿಯೂ ತಮ್ಮ ಛಾಪನ್ನು ಮೂಡಿಸುತ್ತಿವೆ.

ಈ ಮಟ್ಕಾ ಸಿಲ್ಕ್ ತಯಾರಕರು ಒಂದು ವಿಶೇಷ

